# ಬೆಳಕಿನ ನೆರಳು

**ಮಹಾತ್ಮ ಮತ್ತು ಹರಿಲಾಲ್**


■ ಮೂಲ: **ದಿನಕರ್ ಜೋಶಿ**

■ ಕನ್ನಡಕ್ಕೆ: **ಡಿ.ಎನ್. ಶ್ರೀನಾಥ್**

ಕಲೆ: ಮನೋಹರ ಆಚಾರ್ಯ




## ಜ್ವರದಲ್ಲಿ ನರಳಿದ ಹರಿಲಾಲ

ಈ ಅಲೆಮಾರಿ ಜೀವನ ಮತ್ತು ಮಾನಸಿಕ ಬಿಗುವು, ಹರಿಲಾಲನ ಆರೋಗ್ಯದ ಮೇಲೆ ದಿನೇದಿನೇ ತಮ್ಮ ಪ್ರಭಾವವನ್ನು ಬೀರುತ್ತಿದ್ದವು. ಹೈದರಾಬಾದ್‌ನಲ್ಲಿ ವಾಸವಿದ್ದ ಆರಂಭದ ದಿನಗಳಲ್ಲಿ ಹರಿಲಾಲ ಅಬ್ಬಾಸ್ ಅಲಿಗೆ, ತಾನು ಇಲ್ಲಿಗೆ ನೌಕರಿ ಪ್ರಯತ್ನದಲ್ಲಿ ಬಂದಿದ್ದೇನೆ, ಹೀಗಾಗಿ ಹಗಲು ವೇಳೆ ಅಲ್ಲಿ ಇಲ್ಲಿ ಓಡಾಡಬೇಕಾಗುತ್ತದೆ ಎಂದು ಹೇಳಿದ್ದ. ಆದರೆ ಹೀಗೆ ಅಲೆದಾಡಿದ ನಂತರ ತುಂಬಾ ದಣಿಯುತ್ತಿದ್ದ. ಈ ದಣಿವನ್ನು ನೀಗಿಸಿಕೊಳ್ಳಲು ರಾತ್ರಿ ವೇಳೆಯಲ್ಲಿ, ಹಸಿದವನಂತೆ ಮದ್ಯಕ್ಕೆ ಮುಗಿ ಬೀಳುತ್ತಿದ್ದ. ಇದು ಅವನ ಆರೋಗ್ಯದ ಮೇಲೆ ದುಷ್ಪರಿಣಾಮವನ್ನು ಬೀರುತ್ತಿತ್ತು. ಈ ಅಲೆದಾಟದಲ್ಲಿ ಆಹಾರ ಸೇವನೆಯಲ್ಲಿ ವ್ಯತ್ಯಾಸವಾಗುತ್ತಿತ್ತು. ಜೇಬಿನಲ್ಲಿ ಹಣವಿರುತ್ತಿರಲಿಲ್ಲ. ಈ ಎಲ್ಲದರ ಪರಿಣಾಮದಿಂದ ಅವನ ಆರೋಗ್ಯದಲ್ಲಿ ಏರುಪೇರಾಯಿತು. ಜ್ವರ ಕಾಡಿತು, ಅದರೊಂದಿಗೆ ನಿಶ್ಯಕ್ತಿ ಸೇರಿಕೊಂಡಿತು. ಪರಿಸ್ಥಿತಿ ಎಲ್ಲಿಗೆ ಬಂತೆಂದರೆ, ನೌಕರಿಯ ನೆಪದಲ್ಲಿ ಅತ್ತ ಇತ್ತ ಅಲೆದಾಡುತ್ತಿದ್ದ ಅವನು ಈಗ ಮಲಗಿದ್ದಲ್ಲಿಯೇ ಮಲಗಬೇಕಾಯಿತು.

ಅಬ್ಬಾಸ್ ಅಲಿಗೆ ಹರಿಲಾಲನ ಆತಿಥ್ಯ ಗಂಟಲಿನಲ್ಲಿ ಸಿಕ್ಕಿಕೊಂಡ ಎಲುಬಿನಂತಾಗಿತ್ತು. ಕಡೆಗೆ ಅವನು ಹರಿಲಾಲನಿಗೆ ತನ್ನ ಮಿತಿಯ ಬಗ್ಗೆ ಹೇಳಿ ಕೈಮುಗಿದು, 'ಹರಿಲಾಲ, ಇನ್ನು ನೀನು ಬೇರೆ ವ್ಯವಸ್ಥೆಯನ್ನು ಮಾಡಿಕೋ' ಎಂದ.

ಹರಿಲಾಲ ಗೋದರೇಜ್ ಕಂಪನಿಯಲ್ಲಿ ಸೇಲ್ಸ್‌ಮನ್ ಆಗಿದ್ದಾಗ ಹೈದರಾಬಾದಿನಲ್ಲಿ ಸೇಠ್ ತುಲಸೀರಾಮ್ ಎಂಬುವರ ಪರಿಚಯವಾಗಿತ್ತು. ತುಲಸೀರಾಮರು ದೊಡ್ಡ ವ್ಯಾಪಾರಿಗಳಾಗಿದ್ದು, ಹರಿಲಾಲನ ಬಗ್ಗೆ ಅವರಿಗೆ ತುಂಬಾ ಪ್ರೀತಿಯಿತ್ತು. ಹರಿಲಾಲ ಸೇಲ್ಸ್‌ಮನ್ ಆಗಿದ್ದಾಗ ಎರಡು ಮೂರು ಬಾರಿ ತುಲಸೀರಾಮರ ಅಂಗಡಿಗೂ ಬಂದಿದ್ದ. ತುಲಸೀರಾಮರು ಹರಿಲಾಲನನ್ನು ಭೇಟಿಯಾದಾಗಲೆಲ್ಲಾ ಈ ಮಾತನ್ನು ಅಗತ್ಯವಾಗಿ ಹೇಳುತ್ತಿದ್ದರು

'ಹರಿಲಾಲ್! ನೀವು, ನಿರ್ಧರಿಸಿದ್ದನ್ನು ಕಾರ್ಯರೂಪಕ್ಕೆ ತರುವ ಮಹಾಪುರುಷನ ಮಗನಾಗಿದ್ದೀರ. ಬಾಪೂ ಅವರ ಈ ಹೋರಾಟಕ್ಕೆ ನಮ್ಮ ಸಹಾನುಭೂತಿಯೂ ಇದೆ, ಆದರೆ ನಾವು ಎಷ್ಟಾದರು ವ್ಯಾಪಾರಿಗಳು...ಪ್ರತ್ಯಕ್ಷವಾಗಿ ನಾವೇನೂ ಮಾಡಲು ಸಾಧ್ಯವಿಲ್ಲ, ಆದರೆ ಸಮಯ ಬಂದಾಗ ನಾವು ನಿನಗಾಗಿ ಏನೇ ಮಾಡಲು ಸಹ ಹಿಂಜರಿಯುವುದಿಲ್ಲ.'

* * *

ಈಗ ತಾನು ಅಬ್ಬಾಸ್ ಅಲಿಗೆ ಬೇಡದ ಅತಿಥಿ ಎಂದು ಹರಿಲಾಲನಿಗೆ ಅನ್ನಿಸಿದಾಗ, ಅವನಿಗೆ ಸೇಠ್ ತುಲಸೀರಾಮರ ನೆನಪಾಯಿತು. ಜ್ವರದ ಅವಸ್ಥೆಯಲ್ಲಿಯೇ ಅವನು ತುಲಸೀರಾಮರನ್ನು ಸಂಪರ್ಕಿಸಿದ. ಹರಿಲಾಲ ತುಲಸೀರಾಮರಿಗೂ, ಅಬ್ಬಾಸ್ ಅಲಿಗೆ ಹೇಳಿದ್ದ ಮಾತನ್ನೇ ಹೇಳಿದ.

'ತುಲಸೀರಾಮ್‌ಜೀ! ಒಂದು ಜಾಗದಲ್ಲಿ ನೌಕರಿ ಬಗ್ಗೆ ಮಾತುಕತೆ ನಡೆಯುತ್ತಿದೆ, ಅದು ಸಿಗುವ ಪೂರ್ಣ ಭರವಸೆಯಿದೆ, ಆದರೆ ನನ್ನ ಆರೋಗ್ಯ ಸ್ವಲ್ಪ ಕೆಟ್ಟಿದೆ. ಒಂದು ವೇಳೆ ಎಲ್ಲಾದರು ಕೆಲವು ದಿನಗಳು ಉಳಿಯುವ ವ್ಯವಸ್ಥೆಯಾಗಿದ್ದರೆ, ತುಂಬಾ ಉಪಕಾರವಾಗುತ್ತಿತ್ತು. ನನಗಿದು ಅಪರಿಚಿತ ಸ್ಥಳ, ಎಲ್ಲಿಗೆ ಹೋಗುವುದು, ಏನು ಮಾಡುವುದು? ಎಂದು ತೋಚುತ್ತಿಲ್ಲ. ಅಲ್ಲದೆ ಕೈಯಲ್ಲಿ ಹಣವೂ ಇಲ್ಲ...'

ತುಲಸೀರಾಮರು ತಕ್ಷಣ ಹರಿಲಾಲ ಉಳಿದುಕೊಳ್ಳಲು ತಮ್ಮ ಮನೆಯ ಹಿಂದಿದ್ದ ಕೋಣೆಯೊಂದನ್ನು ಖಾಲಿ ಮಾಡಿಸಿಕೊಟ್ಟರು. ಅವನಿಗೆ ಸ್ವಲ್ಪ ಹಣವನ್ನೂ ಕೊಟ್ಟರು. ನೀವು ಯಾವ ನೌಕರಿಗಾಗಿ ಇಲ್ಲಿಗೆ ಬಂದಿದ್ದೀರೋ, ಅದಕ್ಕೇನಾದರೂ ನನ್ನಿಂದ ಸಹಾಯ ಬೇಕಿದ್ದರೆ, ಸಂಕೋಚ ಮಾಡಿಕೊಳ್ಳದೆ ಕೇಳಿ ಎಂದೂ ಸಹ ಹೇಳಿದರು.

ಹರಿಲಾಲನ ಕೋಣೆ, ಆ ಮನೆಯ ತುಂಬಾ ಹಿಂಭಾಗದಲ್ಲಿತ್ತು. ಅಲ್ಲಿಗೆ ಬರುವುದುಹೋಗುವುದು ಸಹ ಅಪರೂಪವಾಗಿತ್ತು. ತುಲಸೀದಾಸರು ಮಾಲುಗಳನ್ನು ಮಾರಲು ಹೈದರಾಬಾದ್ ಮತ್ತು ಅಕ್ಕಪಕ್ಕದ ಊರುಗಳಿಗೆ ಪ್ರಯಾಣ ಮಾಡಬೇಕಾಗುತ್ತಿತ್ತು. ಹೀಗಾಗಿ ಅವರು ಹರಿಲಾಲನಿಗೆ, 'ಏನಾದರೂ ಅಗತ್ಯ ಬಿದ್ದರೆ ಹೇಳಿ' ಎಂದಿದ್ದರು. ಹೀಗೆಂದು ಅವರು ತಮ್ಮ ಕೆಲಸಗಳಲ್ಲಿ ತೊಡಗಿಕೊಂಡರು. ಆದರೆ ಹರಿಲಾಲನ ಪರಿಸ್ಥಿತಿ